Sri SANJEEVANATH AIKALA.—Is the Government aware that no jaggery is manufactured from the toddy tapped from palmirah trees ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಇದರ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡಬಹುದು.

ಶ್ರೀಮತಿ ಸುಶೀಲಾ ಬಾಯಿ ಹೀರಾಜಂವ್ ಪಾ.—ಗುಜರಾತಿಗೆ ಬೆಲ್ಲ ಕಳಿಸುತ್ತೀವೆಂದು ಹೇಳಿದಿರಿ, ಇದು ಬೆಳಗಾಂ ಜಿಲ್ಲೆಯವರಿಗಾಗಿ ಎಂದು ಕಳುಹಿಸರಾಗುತ್ತಿತ್ತೋ ? ಅಥವಾ ಗುಜರಾತು ರಾಜ್ಯಕ್ಕೋ ಕಳುಹಿಸುತ್ತಿರುವುದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಗುಜರಾತ್‌ಗೆ ಕಳುಹಿಸಿದುದು ಬೆಳಗಾಂ ಜಿಲ್ಲೆಗೋಸ್ಕರವಾಗಿ. ಆದರೆ ತಮ್ಮಂತಹವರು ಒದರೆ ಜಿಲ್ಲೆಯ ಬೆಲ್ಲ ಚೆನ್ನಾಗಿಲ್ಲ ಎಂದು ಹೇಳಿದರಿ ಎಂದು ತಿಳಿಸಿ ಬಂದುದರಿಂದ ಸ್ವಲ್ಪ ಕೊಂದರೆಯಾಯಿತು ಎಂದೂ ಗೊತ್ತಾಗಿದೆ.

ಶ್ರೀ ಎಸ್. ಶಿವಪ್ಪ.—ನಮ್ಮ ದೇಶದಲ್ಲಿ ಬೆಲ್ಲದ ಬೆರೆ ಅನಿಶ್ಚಿತವಾಗಿರುವುದರಿಂದ ಈ ಧಾರಣೆಯನ್ನು ಸರಿಯಾಗಿ ನಿಗದಿ ಮಾಡಿ ಬೆಲ್ಲ ಮಾಡುವ ರೈತರಿಗೆ ಅನುಕೂಲವಾಗುವಂತಹ ವಾತಾವರಣವನ್ನು ನಿರ್ಮಾಣ ಮಾಡಲು ಕಾಫೀ ಬೋರ್ಡ್ ಮಾಡಿರುವ ತೆ ಬೆಲ್ಲಕ್ಕೂ ಒಂದು ಮಾರ್ಕೆಟಿಂಗು ಬೋರ್ಡ್ ಒಂದನ್ನು ಸ್ಥಾಪನೆ ಮಾಡಿ ಒಂದು ನಿಗದಿಯಾದ ಧಾರಣೆಯನ್ನು ಗೊತ್ತುಮಾಡ ಮಂತೇ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಲ್ಲದ ಮಾರ್ಕೆಟ್ಟಿನ ಎಕ್ಸ್‌ಪೀರಿಯನ್ಸನ್ನು ಈಗ್ಗೆ ಮೂರು ವರ್ಷಗಳಿಂದಲೂ ನೋಡುತ್ತಿದ್ದೇವೆ. ರೈತನ ಕಷ್ಟ ಏನು ಎನ್ನುವುದು ಸರಕಾರಕ್ಕೆ ಗೊತ್ತಿದೆ. You will see that next year the gur prices will go up to an uneconomic level. The Government of India are seized of the need to achieve stability in the production of sugar and jaggery in the country. They are likely to appoint a Sugar Marketing Board. The Food Minister has announced it; but it has not been done.

ಮುಂದಿನ ವರ್ಷ ಬೆಲ್ಲದ ಬೆರೆ ಅಷ್ಟು ಏರುವುದಿಲ್ಲ ಎಂದು ನಾನು ಭಾವಿಸುತ್ತೇನೆ.

Defalcation of Materials like Cement, etc., in the Bangalore Division of Public Works Department.

*Q. - 253. Sri GANGADHARA NAMOSHI (Gulbarga).—

Will the Government be pleased to state :—

(*a*) whether it is a fact that in the Bangalore Division of Public Works Department (Stores) defalcation of materials like cement, etc., have taken place;

(*b*) the extent to the said loss;

(*c*) the persons who were in charge when the loss occurred;

(*d*) whether any enquiry is ordered ?

A.—Sri VEERENDRA PATIL (Minister for Public Works).—

(*a*) Yes.

(*b*) Cement ... Rs. 91,725.
Steel ... Rs. 1,32,960.

(*c*) Three Executive Engineers, one Assistant Engineer who acted as Executive Engineer for some time, one Accounts Superintendent, two Store Keepers and one Clerk.

(*d*) Yes.

ಶ್ರೀ ಗಂಗಾಧರ ನಾಮೋಷಿ.—(ಡಿ)ಗೆ ಉತ್ತರವಾಗಿ ಎನ್‌ಕ್ವೈರಿ ಮಾಡರಾಗಿದೆ ಎಂದು ಹೇಳಿದ್ದೀರಿ. ಅದು ಯಾವ ಸ್ಟೇಜಿನಲ್ಲಿದೆ ?

†ಶ್ರೀ ವೀರೇಂದ್ರ ಪಾಟೀಲ್.—ಎನ್‌ಕ್ವೈರಿಗೆ ಆರ್ಡರು ಮಾಡಿದ್ದು ಅವರು ಈಗ ಇದನ್ನು ಪೋಲೀಸಿಗೆ ರೆಫರ್ ಮಾಡಿದ್ದಾರೆ. ಅದಕ್ಕೆ ಮುಂಚೆ ಯಾವ ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎಂದು ತಿಳಿದುಬಂದಂತೆ ಅವರುಗಳ ಬಗ್ಗೆ ಡಿಪಾರ್ಟುಮೆಂಟಲ್ ಎನ್‌ಕ್ವೈರಿ ಆಗಿ ಅದಕ್ಕೆ 4-6 9 3ರಲ್ಲೇ ಆರ್ಡರು ಮಾಡಲಾ ದೆ, ಇದರ ಬಗೆಗೆ ಇನ್ನೂ ಅಂತಿಕಾರ್ಪಷನ್ನು ಡಿಪಾರ್ಟ್‌ಮೆಂಟಿನ ಡೈರೆಕ್ಟರಿಂದ ರಿಪೋರ್ಟು ಬಂದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಇಷ್ಟು ಅಗಾಧ ಪ್ರಮಾಣದಲ್ಲಿ ಸಾಮಗ್ರಿಗಳು ಕಳವಾಗಿದ್ದರೂ ಸರಕಾರಕ್ಕೆ ಮೊಟ್ಟಮೊದಲು ಇದು ಗೊತ್ತಾದದ್ದು ಯಾವಾಗ?

ಶ್ರೀ ವೀರೇಂದ್ರ ಪಾಟೀಲ್.—ನಮಗೆ ಗೊತ್ತಾದದ್ದು ಸೆಪ್ಟೆಂಬರ್ 1962 ರಲ್ಲಿ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ವಿಚಾರ ಈಗ ಕೋರ್ಟ್ ಮುಂದೆ ಹೋಗಿದೆಯೆ ೀ ಅಥವಾ ಇನ್ನೂ ಕೇವಲ ವಿಚಾರಣೆಯಲ್ಲೇ ಇದೆಯೇ?

Mr. SPEAKER.—He has said that the police are investigating, before going to court.

ಶ್ರೀ ಗಂಗಾಧರ ನಾಮೋಷಿ. ಇಷ್ಟು ದೊಡ್ಡ ಹಣ ದುರ್ವ್ಯಯವಾಗಿದೆ. ಇನ್ನುಮುಂದೆ ಇಂಥ ಹಗರಣಗಳಾಗದಂತೆ ನೋಡಿಕೊಳ್ಳಲು ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರದಲ್ಲಿ ನಮ್ಮ ಅಧಿಕಾರಿಗಳು ಹೋಗಿ ಅಲ್ಲಿ ಒಂದು ಪ್ರೈಮಾ ಫೇಸಿ ಯಾ ಕೆಸಾಗಿದೆ ಎಂದು ತಿಳಿದುಬಂದ ಕೂಡಲೇ ಇದನ್ನು ಮುಂದಿನ ವಿಚಾರಣೆ ಬಗ್ಗೆ ಪೋಲೀಸಿಗೆ ಕೇಸನ್ನು ದಾಖಲ್ಮಾಡಲಾಗಿದೆ. ಇದಾದ ನಂತರ ಎಗ್ಸೆಕ್ಯುಟೀವ್ ಮತ್ತು ಸೂಪರಿಂಟೆಂಡಿಂಗ್ ಗೆ ಇಂಜಿನಿಯರುಗಳಿಗೆ ವರ್ತೆ ಎಲ್ಲಯಾದರೂ ಇಂಥ ವಿಚಾರಗಳಿದ್ದರೆ ಕೂಡಲೇ ಅವುಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಒಂದು ಸರ್ಕ್ಯುಲರನ್ನು ಎಲ್ಲರಿಗೂ ಕಳುಹಿಸಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಇದಕ್ಕೆ ಜವಾಬ್ದಾರರಾದ ಅಧಿಕಾರಿಗಳು ಇನ್ನೂ ಹಾಗೇ ಕೆಲಸದಲ್ಲಿದ್ದಾರೋ ಅಥವಾ ಯಾರನ್ನಾದರೂ ಸಸ್ಪೆಂಡ್ ಮಾಡಲಾಗಿದೆಯೋ?

ಶ್ರೀ ವೀರೇಂದ್ರ ಪಾಟೀಲ್.—ತತ್ಸಂಬಂಧವಲ್ಲಿ ಒಬ್ಬ ಸ್ಟೋರ್‌ಕೀಪರ್‌ನ್ನು ಸಸ್ಪೆಂಡ್ ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟವರೆಂದು ಹೇಳಲಾದ ಇಬ್ಬರು ಅಕೌಂಟ್ಸ್ ಆಫೀಸರನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆ. ಇನ್ನು ಇದಕ್ಕೆ ಸಂಬಂಧಪಟ್ಟವರೆಂದು ಹೇಳಲಾದ ಇಬ್ಬರು ಎಗ್ಸಿಕ್ಯುಟೀವ್ ಇಂಜಿನಿಯರುಗಳ ವೆರಲೂ ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳ ಮೇಲೂ ಎನ ಕ್ವೈರಿ ಕ್ರಮ ನಡೆಯುತ್ತಿದೆ.

ಶ್ರೀ ಜಿ. ರಾಮೇಗೌಡ.—ರೈಲ್ವೆ ಸ್ಟೇಷನ್ನಿನಿಂದ ಸಾಮಾನುಗಳನ್ನು ಸಾಗಿಸಿದವರನ್ನು ಅಪರಾಧಿಗಳನ್ನಾಗಿ ಸೇರಿಸಿದ್ದಾರೆಯೇ ಅಥವಾ ಇಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಪೋಲೀಸಿನವರು ವಿಚಾರಣೆ ಮಾಡುತ್ತಿದ್ದಾರೆ.

Sri C. J. MUCKANNAPPA.—There are two store-keepers and only one of them is prosecuted and the matter is pending before the court. May I know why is this discrimination made and why the other store-keeper should not also be prosecuted?

Mr. SPEAKER.—The impression that I gathered was that that was being investigated by the police. I do not mind a departmental enquiry, but if it is before a court of law I would rather allow supplementaries with caution. Is the matter pending before a court?

Sri VEERENDRA PATIL.—No.

Sri C. J. MUCKANNAPPA.—I am definite. One man from Udipi is going round with all his influence requesting the Government and bringing pressure to bear on them to withdraw the case.

Mr. SPEAKER.—Irrelevant matters need not be brought in here. Can he tell me the name of the court or the number of the case?

---

†indicates that the remarks or speeches have not been revised by the member concerned.

Sri C. J. MUCKANNAPPA.—I do not know the number. I am told the case is before a court in Bangalore. There are several courts and I do not know in which court it is pending.

Mr. SPEAKER.—In the light of insufficient evidence that there is a case pending before a court and in the light of the reply by Government that there is no case pending before a court, I propose to allow further supplementaries.

Sri G. V. GOWDA.—Was there no periodical check in the Stores conducted by the Departmental people? when was the last check made in the stores?

Sri VEERENDRA PATIL.—The last check was made on 1-4-1960. Afterwards up to September 1962 no check was conducted. According to the rules our Executive Engineer and other officers are expected to verify the stocks once in every six months.

Sri S. M. KRISHNA.—According to the answer, 3 Executive Engineers are supposed to be in charge of the stocks. What is the action that the Government propose to take against these 3 Executive Engineers? Have they given an explanation as to why they did not check the stock?

Sri VEERENDRA PATIL.—We have ordered departmental enquiry against these Executive Engineers and the Deputy Director of Anti-Corruption is enquiring into this matter and Government is awaiting his report.

Sri S. SIVAPPA.—Since How long is this departmental enquiry going on?

Sri VEERENDRA PATIL.—We ordered the enquiry on 1-4-1963 and since then it is going on.

Plans and estimates of the Hoskere Medium Irrigation Tank in Ramadurg Taluk.

*Q.—270. Sri R. S. PATIL (Ramdurg).—

Will the Government be pleased to state:—

(a) whether they have received the plans and estimates of the Hoskere Medium Irrigation Tank in Ramdurg Taluk;

(b) what is the estimated cost of it;

(c) the number of acres that would be irrigated by the same?

A.—Sri S. NIJALINGAPPA (Chief Minister).—

(a) No.

(b) and (c) Does not arise.

†ಶ್ರೀ ಎಸ್. ನಿಜಲಿಂಗಪ್ಪ. ಅಧ್ಯಕ್ಷರೆ, ಈಗ ಇಲ್ಲಿ ಒದಗಿಸಿರತಕ್ಕ ಉತ್ತರಕ್ಕೆ ಸ್ವಲ್ಪ ವಿಷಯವನ್ನು ಸೇರಿಸಬೇಕಾಗಿದೆ. ಅದೇನೆಂದರೆ: ಈಗ ಇದರ ಒಂದು ರಫ್ ಅಂದಾಜು ತಯಾರಾಗಿ ಬಂದಿದೆ. ಇದರ ಅಂದಾಜು ಪೆಚ್ಚು 30 ಲಕ್ಷ ರೂಪಾಯಿಗಳು. ಇದರಿಂದ ಸಾಗುವಳಿಯಾಗತಕ್ಕ ಜಮೀನು ಸುಮಾರು 2,750 ಎಕರೆ.